ಕರ್ನಾಟಕ ಸರಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಗುಲಬರ್ಗಾ,

ಸಂ/ಕಂ/ಸಿಬ್ಬಂದಿ-1/93/10-11 ದಿನಾಂಕ: 12-07-2011

## ಪ್ರ ಕ ಟ ಣೆ

ವಿಷಯ:- ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳ ನೇರ ನೇಮಕಾತಿ ಪರಿಶೀಲನ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ.ಕಂಇ/04/ಬಿಎಸ್ ಸಿ/2011 ದಿನಾಂಕ: 25-02-2011

2. ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 05-04-2011.

000

ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಉಲ್ಲೇಖ-2 ರ ಆದೇಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆನ್ ಲೈನ್ ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ನೇಮಕಾತಿ ಕುರಿತು ತಯ್ಯಾರಿಸಲಾದ ಪರಿಶೀಲನಾ ಪಟ್ಟಿ ಜಿಲ್ಲಾಧಿಕಾರಿಗಳು ಗುಲಬರ್ಗಾ ರವರ ಕಾರ್ಯಾಲಯದಲ್ಲಿ ಹಾಗೂ ವೆಬ್ ಸೈಟೈನಲ್ಲಿ **www.Gulbarga.nic.in** ರಲ್ಲಿ ಪ್ರಚುರಪಡಿಸಲಾಗಿದೆ. ಸದರಿ ಪರಿಶೀಲನಾ ಪಟ್ಟಿ ಆಕ್ಷೇಪಣಾ ಮತ್ತು ತಕರಾರುಗಳನ್ನು ಸಲ್ಲಿಸಲು ದಿನಾಂಕ: 12-07-2011 ರಿಂದ 23-07-2011 ರ ವರೆಗೆ ಅವಧಿ ನಿಗಧಿಪಡಿಸಲಾಗಿದೆ. ಆಕ್ಷೇಪಣಾ ಮತ್ತು ತಕರಾರುಗಳನ್ನು ಲಿಖಿತ ರೂಪದಲ್ಲಿ ನೇರವಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಿದೆ. ಅವಧಿ ಮುಗಿದ ನಂತರ ಆಕ್ಷೇಪಣಾ ಮತ್ತು ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಪರಿಶೀಲನಾ ಪಟ್ಟಿಯನ್ನು ಅಭ್ಯರ್ಥಿಗಳು ಕೇವಲ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ನಿಗದಿಪಡಿಸಿದ ದಿನಾಂಕದಂದು ಹಾಜರಾಗತಕ್ಕದ್ದು. ಇದಕ್ಕಾಗಿ ಪ್ರತ್ಯೇಕವಾಗಿ ಯಾವುದೇ ಸೂಚನಾ ಪತ್ರ (Intimation Letter) ನ್ನು ಈ ಕಛೇರಿಯಿಂದ ಕಳುಹಿಸಲಾಗುವುದಿಲ್ಲ.

ಪರಿಶೀಲನಾ ಪಟ್ಟಿಯಂತೆ ಅರ್ಹ ಅಭ್ಯರ್ಥಿಗಳು ದಿನಾಂಕ:06-08-2011 ರಂದು 10.00 ಗಂಟೆಯಿಂದ ಸಾ:4.00 ಗಂಟೆಯವರೆಗೆ (ಡಾ.ಎಸ್.ಎಂ.ಪಂಡಿತ ರಂಗಮಂದಿರ, ಜಗತ್ ವೃತ್ತದ ಹತ್ತಿರ ಗುಲಬರ್ಗಾ) ದಲ್ಲಿ ದಾಖಲಿಸಬೇಕು. ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕೆ ಅಭ್ಯರ್ಥಿಯು ಗೈರು ಹಾಜರಾಗಿದಲ್ಲಿ ನಂತರದಲ್ಲಿ ಅವರನ್ನು ನೇಮಕಾತಿಗಾಗಿ ಪರಿಗಣಿಸಲಾಗುವುದಿಲ್ಲ. ಪರೀಶಿಲನಾ ಸಮಯದಲ್ಲಿ ಬರುವ ಅಭ್ಯರ್ಥಿಗಳಿಗೆ ಈ ಕಾರ್ಯಾಲಯದಿಂದ ಪ್ರಯಾಣ ಭತ್ಯೆ ಇತ್ಯಾದಿಗಳನ್ನು ನೀಡಲಾಗುವುದಿಲ್ಲ. ಪರೀಶಿಲನಾ ಪಟ್ಟಿಯಲ್ಲಿ ಕಾಣಿಸಿದ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆ ಬಗ್ಗೆ ಮಾತ್ರ ಸೀಮಿತವಾಗಿದ್ದು ಅರ್ಹ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿಗಾಗಿ ಪರಿಗಣಿಸಲಾಗುವುದು. ಪರೀಶಿಲನಾ ಸಮಯದಲ್ಲಿ ಅಭ್ಯರ್ಥಿಗಳು ಹಾಜರಪಡಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ.

1) ಇತ್ತೀಚಿನ 4 ಪಾಸಪೋರ್ಟ ಭಾವಚಿತ್ರಗಳು.
2) ಆನ್ ಲೈನ್ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಒಂದು ಸೆಟ್ ದೃಢೀಕೃತ ಪ್ರಮಾಣ ಪತ್ರವನ್ನು ಹಾಜರಡಿಸಬೇಕು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ (Acknowledgement) ಪಾವತಿ ಹಾಗೂ ಹಣ ತುಂಬಿದ ಬಗ್ಗೆ ಬ್ಯಾಂಕಿನಿಂದ ಪಡೆದ ಮೂಲ ಚಲನ ಪ್ರತಿಯನ್ನು ಹಾಜರ ಪಡಿಸಬೇಕು.
3) ಮೂಲ ಮತ್ತು ದೃಢೀಕೃತ ದ್ವಿತಿಯ ಪಿ.ಯು.ಸಿ ಅಥವಾ 12 ನೇ ತರಗತಿಯ ಸೆಂಟ್ರಲ್ ಬೋರ್ಡ ಆಫ್ ಸೆಕೆಂಡರಿ ಎಜುಕೇಶನ್ (ಸಿ.ಬಿ.ಎಸ್.ಸಿ) ಅಥವಾ ಐ.ಸಿಎಸ್.ಸಿ.ಪರಿಕ್ಷೆಯ ಪ್ರಮಾಣ ಪತ್ರ.
4) ಮೂಲ ಮತ್ತು ದೃಢೀಕೃತ ದ್ವಿತಿಯ ಪಿ.ಯು.ಸಿ ಅಥವಾ 12 ನೇ ತರಗತಿಯ ಸೆಂಟ್ರಲ್ ಬೋರ್ಡ ಆಫ್ ಸೆಕೆಂಡರಿ ಎಜುಕೇಶನ್ (ಸಿ.ಬಿ.ಎಸ್.ಸಿ) ಅಥವಾ ಐ.ಸಿಎಸ್.ಸಿ.ಪರಿಕ್ಷೆಯ ಪ್ರಮಾಣ ಪತ್ರ.

5) ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಲು ಮೂಲ ಹಾಗೂ ದೃಢೀಕೃತ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪತ್ರ/ವರ್ಗಾವಣೆ ಪತ್ರ/ ಜನನ ದಿನಾಂಕವನ್ನು ತೋರಿಸಲು ಸಂಚಿತ ದಾಖಲೆ ಉದ್ಧೃತ ಭಾಗ ಪರೀಶಿಲನೆಗೆ ಹಾಜರಪಡಿಸಬೇಕು.

6) ಜಾತಿಯ ಬಗ್ಗೆ ಮೀಸಲಾತಿ ಬಯಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರ.

7) ಗ್ರಾಮೀಣ ಮೀಸಲಾತಿಯನ್ನು ಕೋರುವ ಅರ್ಭ್ಯಥಿಗಳೂ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಮೂಲ ಹಾಗೂ ದೃಢೀಕೃತ ಪ್ರಮಾಣ ಪತ್ರ ಹಾಜರಪಡಿಸಬೇಕು.

8) ಕನ್ನಡ ಮಾಧ್ಯಮ ಮೀಸಲಾತಿ ಬಯಸುವ ಅಭ್ಯರ್ಥಿಗಳೂ 1ನೇ ತರಗತಿಯಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಬಗ್ಗೆ ನಿಗದಿತ ನಮೂನೆಯಲ್ಲಿ ಮೂಲ ಹಾಗೂ ದೃಢೀಕೃತ ಪ್ರಮಾಣ ಪತ್ರ ಹಾಜರಪಡಿಸಬೇಕು.

9) ಗ್ರಾಮ ಲೆಕಿಗ ಹುದ್ದೆಗೆ ನಿಗದಿಪಡಿಸಿದಂತೆ ಅಭ್ಯರ್ಥಿಯು ಕುಷ್ಠ ರೋಗದಿಂದ ಗುಣಮುಖರಾದವರು ಶ್ರವಣದೋಷವುಳ್ಳವರು ಹಾಗೂ ಮಾನಸಿಕ ಅಸ್ವಸ್ಥತೆಯನ್ನು ಹೊಂದಿದವರನ್ನು ಮಾತ್ರ ನೇಮಕಾತಿಗೆ ಪರಿಗಣಸಲಾಗುವುದರಿಂದ ಈ ಬಗ್ಗೆ ನಿಗಧಿತ ನಮೂನೆಯಲ್ಲಿ ಮೂಲ ಹಾಗೂ ದೃಢೀಕೃತ ಪ್ರಮಾಣ ಪತ್ರ ಹಾಜರಪಡಿಸಬೇಕು.

10) ಮಾಜಿ ಸೈನಿಕರ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ ಹಾಜರಪಡಿಸಬೇಕು.

11) ಯೋಜನಾ ನಿರಾಶ್ರಿತ ಮೀಸಲಾತಿ ಬಯಸುವ ಅಭ್ಯರ್ಥಿಗಳು ತಹಸೀಲ್ದಾರರಿಂದ ಪಡೆದ ಪ್ರಮಾಣ ಪತ್ರ ಹಾಜರಪಡಿಸಬೇಕು.

12) ವಿಧವಾ ಅಭ್ಯರ್ಥಿಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಹಾಜರಪಡಿಸಬೇಕು.

12/07/11

ಅಧ್ಯಕ್ಷರು,
ಗ್ರಾಮಲೆಕ್ಕಾಧಿಕಾರಿ ನೇಮಕಾತಿ ಆಯ್ಕೆ ಸಮಿತಿ
ಹಾಗೂ ಜಿಲ್ಲಾಧಿಕಾರಿಗಳು ಗುಲಬರ್ಗಾ

ಪ್ರತಿಯನ್ನು:–

1. ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಬೆಂಗಳೂರ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ (ಸೇವೆಗಳು) ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಪ್ರಾದೇಶಿಕ ಆಯುಕ್ತರು ಗುಲಬರ್ಗಾ ವಿಭಾಗ ಗುಲಬರ್ಗಾ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಉಪನಿರ್ದೇಶಕರು ಜಿಲ್ಲಾ ವಾರ್ತಾ ಮತ್ತು ಪ್ರಚುರ ಇಲಾಖೆ ಗುಲಬರ್ಗಾ, ಇವರಿಗೆ ನಿಡುತ್ತಾ ಪ್ರಕಟಣೆಯನ್ನು ಸಂಕ್ಷಿಪ್ತವಾಗಿ ರಾಜ್ಯಾದ್ಯಂತ ಪ್ರಮುಖ ದಿನ ಪತ್ರಿಕೆಗಳಲ್ಲಿ ಸರ್ಕಾರಕ್ಕೆ ಯಾವುದೇ ಹೊರೆ ಬೀಳದಂತೆ ಪ್ರಕಟಿಸಲು ಕೋರಿದೆ. ನಂತರ ಅವುಗಳ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಿದೆ.
5. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಗುಲಬರ್ಗಾ ಇವರಿಗೆ ಸೂಕ್ತ ಕ್ರಮಕ್ಕಾಗಿ.
6. ಜಿಲ್ಲೆಯ ಎಲ್ಲಾ ಸಹಾಯಕ ಆಯುಕ್ತರಿಗೆ ಮತ್ತು ತಹಸೀಲ್ದಾರರಿಗೆ ಪರಿಶೀಲನಾ ಪಟ್ಟಿಯನ್ನು ತಮ್ಮ ಕಾರ್ಯಾಲಯದಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸುವ ಕುರಿತು ಸೂಚಿಸಿ ಕಳುಹಸಿಲಾಗಿದೆ.
7. ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.
8. ಹೆಚ್ಚುವರಿ ಪ್ರತಿ ಶಾಖಾ ಕಡತಕ್ಕೆ.

12/07/11

ಅಧ್ಯಕ್ಷರು,
ಗ್ರಾಮಲೆಕ್ಕಾಧಿಕಾರಿ ನೇಮಕಾತಿ ಆಯ್ಕೆ ಸಮಿತಿ
ಹಾಗೂ ಜಿಲ್ಲಾಧಿಕಾರಿಗಳು ಗುಲಬರ್ಗಾ